**<u>ಸಾಕ್ಷಿಯನ್ನು ದಿನಾಂಕಃ 26-02-2026 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲುಃ ಪ್ರತಿವಾದಿ ನಂ. 1 ಪರ ವಕೀಲರವರಿಂದಃ</u>**

1. ಬರಮಪ್ಪನಿಗೆ 4 ಜನ ಮಕ್ಕಳು ಅವರೆಂದರೆ, ಹನುಮವ್ವ, ಚಂದ್ರವ್ವ, ಹನುಮಂತಪ್ಪ ಮತ್ತು ಕೆಂಚಮ್ಮ. ಹನುಮವ್ವ 25 ವರ್ಷಗಳ ಹಿಂದೆ ಮೃತ ಪಟ್ಟಿರುವರು. ಆಕೆಗ 3 ಜನ ಮಕ್ಕಳು ಅವರೆಂದರೆ ಶಾಂತಮ್ಮ, ದೇವೇಂದ್ರಪ್ಪ ಮತ್ತು ಕೆಂಚಪ್ಪ. ಹನುಮವ್ವನ ಮಕ್ಕಳನ್ನು ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಅಂದರೆ ಸರಿ. ಈ ಅಸ್ತಿಯಲ್ಲಿ ಹನುಮವ್ವನ ಮಕ್ಕಳಿಗೆ ಪಾಲು ಇರುವುದಿಲ್ಲ. ನಾನು ಕೇವಲ ಒಂದು ಹೊಲದ ಮೇಲೆ ಈ ದಾವೆಯನ್ನು ದಾಖಲಿಸಿದ್ದೇನೆ. ದಾವಾ ಅಸ್ತಿಯನ್ನು ಹೊರತು ಪಡಿಸಿ ಕುಟುಂಬಕ್ಕೆ ಬೇರೆ ಯಾವುದೇ ಅಸ್ತಿಗಳು ಇರುವುದಿಲ್ಲ.

2. ನನ್ನ,ಚಂದ್ರಮ್ಮ ಮತ್ತು ಹನುಮವ್ವನ ವಿವಾಹವನ್ನು ಹನುಮಂತಪ್ಪನೇ ಮಾಡಿರುವನು ಅಂದರೆ ಸರಿ. ನಮ್ಮಗಳ ಮದುವೆಗೆ ಹನುಮಂತಪ್ಪನು ಸಾಕಷ್ಟು ಸಾಲ ಮಾಡಿದ್ದನು ಅಂದರೆ ಸರಿಯಲ್ಲ. ಆ

ಸಾಲವನ್ನು ತೀರಿಸಲು ಹನುಮಂತಪ್ಪನು ದಾವಾ ಅಸ್ತಿಯನ್ನು 5 ನೇ ಪ್ರತಿವಾದಿಗೆ ಮಾರಾಟ ಮಾಡಿರುವನು ಅಂದರೆ ಸರಿಯಲ್ಲ. ದಾವಾ ಅಸ್ತಿ ಈಗ ನನ್ನ ತಮ್ಮನಾದ 1 ನೇ ಪ್ರತಿವಾದಿಯ ಹೆಸರಿನಲ್ಲಿರುವುದು. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದಾವಾ ಅಸ್ತಿಯ ಪಹಣಿ 5 ನೇ ಪ್ರತಿವಾದಿಯಾದ ಹನುಮಂತಪ್ಪ ತಂದೆ ಮಲ್ಲಪ್ಪ ಇವರ ಹೆಸರಿನಲ್ಲಿ ಇರುವುದು ಅಂದರೆ ಸರಿಯಲ್ಲ.

3. 1 ನೇ ಪ್ರತಿವಾದಿಯು ಖರೀದಿ ಕರಾರನ್ನು ಬರೆದುಕೊಟ್ಟ ನಂತರ ದಾವಾ ಅಸ್ತಿಯು ನ್ಯಾಯಾಲಯದ ಮುಖಾಂತರ 5 ನೇ ಪ್ರತಿವಾದಿಯ ಹೆಸರಿಗೆ ನೊಂದಣ ಕ್ರಯ ಪತ್ರ ಆಗಿರುವುದು ಅಂದರೆ ಸರಿಯಲ್ಲ. 2010 ರಲ್ಲಿ ನನ್ನ ಅಕ್ಕನಾದ ಚಂದ್ರಮ್ಮಳು ನನ್ನ ಹಾಗೂ ನಮ್ಮ ಕುಟುಂಬದ ಇತರೆ ಸದಸ್ಯರ ಮೇಲೆ ಪಾಲು ದಾವೆಯನ್ನು OS 93/2010 ರಂತೆ ಕುಟುಂಬದ ಅಸ್ತಿಗಳಿಗೆ ಸಂಬಂದಿಸಿದಂತೆ ದಾಖಲು ಮಾಡಿದ್ದರು ಅಂದರೆ ಸರಿ. ಆ ದಾವೆಯಲ್ಲಿ ಈ ದಾವಾ ಸ್ವತ್ತಿನಲ್ಲಿ ನನಗೆ ಭಾಗ ಇದೆ ಎಂದು ನಾನು ಹೇಳಿದ್ದೆನು. ಆ ದಾವೆಯನ್ನು ನ್ಯಾಯಾಲಯವು ವಜಾಗೊಳಿಸಿತು ಅಂದರೆ ನನಗೆ ಗೊತ್ತಿಲ್ಲ.

ನಾವು ಸಹೋದರಿಯರು ಹನುಮಂತಪ್ಪನಿಗೆ ತೊಂದರೆ ಕೊಡಲು ಸುಳ್ಳು ದಾವೆಗಳನ್ನು ಮಾಡುತ್ತಾ ಬಂದಿದ್ದೇವೆ ಅಂದರೆ ಸರಿಯಲ್ಲ.

4. ದಾವಾ ಅಸ್ತಿಯನ್ನು ನಾವೇ ಸಾಗುವಳಿ ಮಾಡುತ್ತಿದ್ದೇವೆ. ಹಿಂದಿನಿಂದಲೂ ದಾವಾ ಸ್ವತ್ತನ್ನು ನಾವೇ ಸಾಗುವಳಿ ಮಾಡುತ್ತಿದ್ದೇವೆ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಹನುಮವ್ವಳ ಮಗ ಕೆಂಚಪ್ಪನನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ನಮಗೆ ದಾವಾ ಸ್ವತ್ತಿನ ಮೇಲೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಅಂದರೆ ಸರಿಯಲ್ಲ. ದಾವಾ ಅಸ್ತಿಯ ಮೇಲೆ ನಮಗೆ ಹಕ್ಕು ಇದ್ದಿದ್ದರೆ ಅದನ್ನು ನಾನು ಈ ಹಿಂದೆ ನಡೆದ ದಾವೆಯಲ್ಲಿಯೇ ಪ್ರತಿಪಾದಿಸುತ್ತಿದ್ದೆ ಅಂದರೆ ಸರಿಯಲ್ಲ. 5 ನೇ ಪ್ರತಿವಾದಿ 1 ನೇ ಪ್ರತಿವಾದಿಯ ಮೇಲೆ ಹಾಕಿದ ದಾವೆಯ ವಿಚಾರ ನನಗೆ 2 ವರ್ಷಗಳ ಹಿಂದೆ ಗೊತ್ತಾಗಿರುತ್ತದೆ. ಆ ದಾವೆಯ ಸಂಖ್ಯೆ 274/2013 ಅಂದರೆ ನನಗೆ ಗೊತ್ತಿಲ್ಲ. ಖರೀದಿ ಕರಾರು ಪತ್ರ ಆಗಿರುವ ವಿಚಾರ ನನಗೆ ಮೊದಲೇ ಗೊತ್ತಿತ್ತು ಅಂದರೆ ಸರಿಯಲ್ಲ. ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದಾವಾ ಜಮೀನಿನಲ್ಲಿ ನಾವು ಯಾವತ್ತೂ ಸ್ವಾಧೀನಲ್ಲಿ ಇರಲಿಲ್ಲ ಮತ್ತು ಈಗಲೂ ಇಲ್ಲ ಅಂದರೆ ಸರಿಯಲ್ಲ.

**ಸಾಕ್ಷಿಯ ಸಹಿ** **26.02.2026**

ದಾವಾ ಸ್ವತ್ತು 5 ನೇ ಪ್ರತಿವಾದಿಯ ಸ್ವಾಧೀನದಲ್ಲಿರುವುದು ಅಂದರೆ ಸರಿಯಲ್ಲ. ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀಸವಾಲುಃ ಪ್ರತಿವಾದಿ ನಂ. 2 ಮತ್ತು 3 ಪರ ವಕೀಲರವರಿಂದಃ**

ಶಾಂತಮ್ಮ ನನ್ನ ಅಕ್ಕನ ಮಗಳು, ಚಂದ್ರಮ್ಮ ನನ್ನ ಅಕ್ಕ. ಚಂದ್ರಮ್ಮಳು 10.12.2022 ರಂದು ಮೃತ ಪಟ್ಟರು ಅಂದರೆ ಸರಿ. 1 ನೇ ಪ್ರತಿವಾದಿ ಒಬ್ಬನಿಗೆ ಮಾತ್ರ ಖರೀದಿ ಕರಾರು ಪತ್ರವನ್ನು ಮಾಡಿಕೊಡುವ ಅಧಿಕಾರ ಇರಲಿಲ್ಲ ಅಂದರೆ ಸರಿ. ಅದು ಪಿತ್ರಾರ್ಜಿತ ಆಸ್ತಿ ಅಂದರೆ ಸರಿ. ದಾವಾ ಅಸ್ತಿಯಲ್ಲಿ ನನಗೆ, 1 ನೇ ಪ್ರತಿವಾದಿಗೆ, ಚಂದ್ರಮ್ಮನ ಮಕ್ಕಳಿಗೆ ಮತ್ತು ಶಾಂತಮ್ಮನಿಗೆ ಸಮಾನ ಹಿಸ್ಸೆ ಬರುತ್ತದೆ ಅಂದರೆ ಸರಿ. ಇವತ್ತಿಗೂ ದಾವಾ ಜಮೀನನ್ನು ನಾವೇ ಸಹೋದರ ಸಹೋದರಿಯರು ಸಾಗುವಳಿ ಮಾಡುತ್ತಿದ್ದೇವೆ ಅಂದರೆ ಸರಿ. ಕುಟುಂಬದ ಒಳಗೆ ಈ ವರೆಗೆ ಪಾಲು ಆಗಿರುವುದಿಲ್ಲ ಅಂದರೆ ಸರಿ.

<u>**ಪಾಟೀಸವಾಲುಃ ಪ್ರತಿವಾದಿ ನಂ. 5 ಪರ ವಕೀಲರವರಿಂದಃ ಸಮಯ ಕೋರಿದ್ದರಿಂದ ಮುಂದೂಡಲಾಯಿತು.**</u>

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

26-02-2026

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** 26.02.2026